





## ಹ್ಯಾಗಿದೆ ಹ್ಯಾಂಗಿಂಗ್?



ದೊಡ್ಡ ದೊಡ್ಡ ಹ್ಯಾಂಗಿಂಗ್ ಇರುವ ಕಿವಿಯೋಲೆ ಈಗಿನ ಹುಡುಗಿಯರ ಮೆಚ್ಚು. ಕತ್ತಿನ ಆಭರಣಕ್ಕಿಂತ ಕಿವಿಯ ಒಡವೆ ಮೇಲೆ ಹೆಚ್ಚು ಮೋಹ ಇಂದಿನ ಹೆಣ್ಣುಮಕ್ಕಳಿಗೆ. ಹ್ಯಾಂಗಿಂಗ್ ಓಲೆ ಎಷ್ಟು ದೊಡ್ಡದಿರಬೇಕೆಂದರೆ ಭುಜದವರೆಗೆ ತಾಗದಂತೆ ಕೆನ್ನೆಯ ತನಕ ಇದ್ದರೆ ಸಾಕು. ಆಗ ವಿನ್ಯಾಸ ಸರಿಯಾಗಿ ಕಾಣುತ್ತದೆ. ಮುಖಕ್ಕೆ ಸರಿಯಾಗಿ ಒಪ್ಪುತ್ತದೆ.

ಹ್ಯಾಂಗಿಂಗ್‌ಗಳಲ್ಲಿ ಹಲವು ವಿಧ, ಎಲ್ಲವೂ ವಿಭಿನ್ನ ವಿನ್ಯಾಸದವೇ. ಜಾಲರಿ ಹ್ಯಾಂಗಿಂಗ್, ಗೊಂಚಲು ಹ್ಯಾಂಗಿಂಗ್, ಲೋಲಕ್ ಹ್ಯಾಂಗಿಂಗ್ ಹೀಗೆ.

**ಜಾಲರಿ ಹ್ಯಾಂಗಿಂಗ್:** ಇದರಲ್ಲಿ ಎರಡು ಮೂರು ಎಳೆಗಳಿದ್ದು, ಒಂದರ ನಂತರ ಇನ್ನೊಂದು ಕಾಣುವಂತೆ ಇರುತ್ತದೆ. ಮೇಲೆ ಕಿವಿಯೋಲೆ ಚಿಕ್ಕದಾಗಿ ಇದ್ದು ಹ್ಯಾಂಗಿಂಗ್ ಹೆಚ್ಚು ಎದ್ದುಕಾಣುವಂತಿರುತ್ತದೆ. ಆಧುನಿಕ ವಿನ್ಯಾಸದ ಉಡುಗೆಗಳಿಗೆ ಸಖತ್ ಮ್ಯಾಚ್ ಆಗುತ್ತದೆ.

**ಗೊಂಚಲು ಹ್ಯಾಂಗಿಂಗ್:** ಮುತ್ತು, ರೂಬಿ, ಜೇಡ್, ಹರಳು ಅಥವಾ ಚಿನ್ನದ ಗುಂಡುಗಳ ಗೊಂಚಲುಗಳು ಅಲ್ಲಲ್ಲಿ ಇದ್ದು ಕಿವಿಯಿಂದ ಕೆಳಭಾಗದಲ್ಲಿ ದ್ರಾಕ್ಷಿ ಗೊಂಚಲುಗಳಂತೆ ಹತ್ತಿರ ಹತ್ತಿರವಾಗಿ ಇರಬೇಕು. ಎಲ್ಲ ವಿನ್ಯಾಸಗಳ ಉಡುಗೆಗೆ ಇದು ಸರಿಹೊಂದುತ್ತದೆ.

**ಲೋಲಕ್ ಹ್ಯಾಂಗಿಂಗ್:** ಇದರಲ್ಲಿ ಯಾವುದೇ ಎಳೆಗಳಿಲ್ಲದೆ ಒಂದೇ ಸಮ ಮೇಲಿನಿಂದ ಕೆಳಗಿನವರೆಗೂ ಹ್ಯಾಂಗಿಂಗ್ ಇದ್ದು, ಅಗಲ ಮುಖದ ಮಹಿಳೆಯರಿಗೆ ಸೂಕ್ತ ಆಗುವಂತಿದೆ.

ಹಬ್ಬಹರಿದಿನಗಳಲ್ಲಿ, ಶುಭ ಸಮಾರಂಭಗಳಲ್ಲಿ ಭಾರವಿರುವ ದೊಡ್ಡ ಗಾತ್ರದ ಜುಮುಕಿಗಳ ಜಮಾನಾ ಶುರು ಆಗಿದ್ದೇ ಈ ಕಾನ್ಪುರ ಕಿವಿಯೋಲೆಯ ಅಬ್ಬರ ಹೆಚ್ಚಿದೆ. ಗ್ರ್ಯಾಂಡ್ ಇರುವ ಲೆಹೆಂಗಾ, ಹಾಫ್ ಸಾರಿ, ಭರ್ಜರಿ ರೇಷ್ಮೆ ಸೀರೆ ಧರಿಸಿದಾಗ ಅದಕ್ಕೊಪ್ಪುವ ಭಾರದ ಒಡವೆಗಳೇ ಬೇಕು. ಕಿವಿಯ ಗಾತ್ರಕ್ಕಿಂತ ದೊಡ್ಡದಾದ ಓಲೆ ಧರಿಸುವುದೇ ಈಗಿನ ಟ್ರೆಂಡ್. ಮೊಘಲರು, ಮರಾಠಾ, ರಜಪೂತ ರಾಜಮನೆತನದ ಶ್ರೀಮಂತಿಕೆಯ ಕುರುಹಾಗಿದ್ದ ಈ ಭಾರೀ ಗಾತ್ರದ ಓಲೆಗಳು ಬಾಲಿವುಡ್ ಸಿನಿಮಾಗಳಲ್ಲಿ ಮಿಂಚುತ್ತವೆ. ಸಿನಿಮಾ ಕ್ಷೇತ್ರದಿಂದ ಪ್ರೇರಿತವಾದ ಜ್ಯುವೆಲ್ಲರಿ ಜಗತ್ತು ಅಂತಹುದೇ ವಿನ್ಯಾಸದ ಓಲೆಗಳನ್ನು ಮಾರುಕಟ್ಟೆಗೆ ರವಾನಿಸಿದೆ. ಸಿನಿಮಾಗಳು ಹಳತಾದರೂ ಅದರಲ್ಲಿನ ಒಡವೆಗಳು ಹೊಚ್ಚ ಹೊಸತಾಗಿ ಲಲನೆಯರ ಮೈಮೇಲೆ ಹೊಳೆಯುತ್ತವೆ. ಔಟ್‌ಡೇಟೆಡ್ ಆಗದ ಕಾನ್ಪುರ ಕಿವಿಯೋಲೆ ನಿಮ್ಮ ಕಲೆಕ್ಷನ್‌ನಲ್ಲಿ ಖಂಡಿತವಾಗಿ ಇರಲೇಬೇಕು. ಚಿನ್ನ ಬೆಳ್ಳಿಯ ಬೆಲೆ ಗಗನಕ್ಕೇರಿದ ಈ ದಿನಗಳಲ್ಲಿ ಆರ್ಟಿಫಿಶಿಯಲ್ ಓಲೆಗಳು ಫ್ಯಾನ್ಸಿ ಸ್ಟೋರ್‌ಗಳಲ್ಲಿ ಕೈಗೆಟುಕುವ ಬೆಲೆಯಲ್ಲಿ ಲಭ್ಯವಿದೆ.

ಶಾಪಿಂಗ್ ಸೆಂಟರ್‌ಗಳಲ್ಲಿ ಲೋಲಕ್, ಜುಮುಕಿ, ಕಲೆಕ್ಷನ್‌ನಲ್ಲಿ ಈ ಕಾನ್ಪುರ ಓಲೆ ಎದ್ದು ಕಾಣುತ್ತದೆ. ಸಂಪೂರ್ಣವಾಗಿ ಕಿವಿಯನ್ನು ಅಲಂಕರಿಸುವ ಎಲೆ, ಬಳ್ಳಿ, ಹೂವು, ನವಿಲು, ನಕ್ಷತ್ರ, ಹಾವು, ಚಿಟ್ಟೆ ಹೀಗೆ ಪ್ರಕೃತಿಯ ಪ್ರತಿಫಲನದಂತಿರುವ ಈ ಕಿವಿಯೋಲೆಗಳು ಅದ್ಭುತ. ಚಿನ್ನದ ಓಲೆಯ ಬೆಲೆ ಲಕ್ಷಗಟ್ಟಲೆ ಇದ್ದರೆ, ಆರ್ಟಿಫಿಶಿಯಲ್ ಓಲೆ ಕೇವಲ ನೂರಿನ್ನೂರು ರೂಪಾಯಿಗಳಲ್ಲಿ ಸಿಗುತ್ತದೆ. ಈಗೀಗ ಕಾನ್ಪುರ ಓಲೆ ಕ್ಯಾಶುವಲ್ ಡ್ರೆಸ್‌ಗಳಿಗೂ ಮ್ಯಾಚ್ ಆಗುತ್ತಿದೆ. ಕಾಲೇಜ್ ಹುಡುಗಿಯರು ಒಂದೇ ಕಿವಿಗೆ ನಕ್ಷತ್ರಾಕಾರದ ಅಥವಾ ಬಳ್ಳಿಯಂತಹ ಓಲೆ ಧರಿಸಿ ಫ್ಯಾಷನ್ ಮೆರೆಯುತ್ತಿದ್ದಾರೆ. ಜೀನ್ಸ್ ಕುರ್ತಾ, ಲಾಂಗ್ ಶರ್ಟ್‌ಗಳಿಗೆ ಸಿಂಗಲ್ ಓಲೆ ಹೊಸ ಟ್ರೆಂಡ್ ಆಗಿದೆ.

### ಕೆಲವೊಂದು ಟಿಪ್ಸ್

- ಅರ್ಧ ಚಂದ್ರಾಕೃತಿಯ ಕಾನ್ಪುರ ಓಲೆಗಳು ದುಂಡಗಿನ ಮುಖದವರಿಗೆ ಅಂದವಾಗಿ ಕಾಣುತ್ತದೆ. ಅಗಲ ಮುಖವುಳ್ಳವರು ಸ್ವಲ್ಪ ಲಂಬವಾಗಿ ಹರಳುಗಳಿರುವ ಕಿವಿಯೋಲೆ ಆಯ್ಕೆ ಮಾಡಬೇಕು.
- ಕಿವಿಯ ಆಕಾರಕ್ಕೆ ತಕ್ಕಂತೆ ಓಲೆ ಖರೀದಿಸಿ. ಕಿವಿ ಸಣ್ಣದಾಗಿದ್ದು ದೊಡ್ಡ ಓಲೆ ಧರಿಸಿದರೆ ಅದು ಸರಿಯಾಗಿ ಕಾಣುವುದಿಲ್ಲ. ಟ್ರಯಲ್ ನೋಡಿಯೇ ಖರೀದಿಸಿ. ಈ ಓಲೆಗಳ ಮತ್ತೊಂದು ಪ್ಲಸ್ ಪಾಯಿಂಟ್ ಏನೆಂದರೆ ಕಿವಿಯ ನ್ಯೂನತೆಗಳನ್ನು ಮರೆಮಾಚಬಹುದು. ಕಿವಿ ಹಾಲೆಯಲ್ಲಿ ಮಚ್ಚೆ, ಸೀಳುಗಳಿದ್ದರೆ ಕಿವಿಯೋಲೆಯಿಂದ ಮುಚ್ಚಬಹುದು.
- ದಿನನಿತ್ಯ ಆಫೀಸ್, ಕಾಲೇಜುಗಳಿಗಾದರೆ ಸಿಂಪಲ್ಲಾಗಿರುವ ನಕ್ಷತ್ರ ಆಕಾರದ ಓಲೆ ಚಂದ. ಧರಿಸುವ ಉಡುಪಿಗೆ ಮ್ಯಾಚ್ ಮಾಡಿಕೊಂಡು ಓಲೆ ಆಯ್ದುಕೊಳ್ಳಿ. ಗ್ರ್ಯಾಂಡ್ ಡ್ರೆಸ್‌ಗಳಾದ ಲೆಹೆಂಗಾ, ಗಾಗ್ರಾ ಚೋಲಿ, ಸೀರೆಗಳಿಗೆ ಈ ಕಾನ್ಪುರ ಓಲೆಗಳು ಬೆಸ್ಟ್ ಕಾಂಬಿನೇಷನ್.